ಎನ್.ಆರ್.ಇ.ಪಿ. ಅಥವಾ ಆರ್.ಎಲ್.ಇ.ಜಿ.ಪಿ., ಯೋಜನೆ ಅಥವಾ ಇತರ ವಿಶೇಷ ಯೋಜನೆ ಮೂಲಕ ಅವಶ್ಯಕ ತಾಮಗಾರಿಗಳನ್ನು ಪ್ರಾರಂಭಿಸಿ, ಸಂತ್ರಸ್ತ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿ ಕೊಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಜೆ.ಎಸ್. ದೇಶಮುಖ್(ಆರೋಗ್ಯ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯದ ಕುರಿತು ಈಗ ನನ್ನ ಹತ್ತಿರ ವಿವರಗಳು ಇಲ್ಲ. ನಾಳೆಯ ದಿವಸ ಅವರಿಗೆ ವಿವರಗಳನ್ನು ಒದಗಿಸಿ ಕೊಡುತ್ತೇನೆ.

(3) ಉಳ್ಳಾಲದಲ್ಲಿ ಅಬೂಬಕರ್ ಎಂಬ ವ್ಯಕ್ತಿ ವಿದ್ಯುತ್ ಕಂಬಿ ತಗಲಿ ಸಾವನ್ನಪ್ಪಿದ್ದುದರಿಂದ ಅವನ ಕುಟುಂಬದವರಿಗೆ ಪರಿಹಾರ ಕೊಡಲು ಮನವಿ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲ್ಲೂಕಿನ ಉಳ್ಳಾಲ ಪೇಟೆಯ ಕೋಡಿ ಎಂಬಲ್ಲಿ ೭-೩-೧೯೮೯ರಂದು ತುಕ್ಕು ಹಿಡಿದು ಹಳತಾದ ವಿದ್ಯುತ್ ಸರಿಗೆ ತುಂಡಾಗಿ ಅಬುಬಕ್ಕರ್ ಎಂಬ ೨೫ ವರ್ಷದ ತರುಣನ ಮೇಲೆ ಬಿದ್ದಿದ್ದು ತಕ್ಷಣ ಮರಣ ಹೊಂದಿರುತ್ತಾನೆ. ಈ ಹಳತಾದ ತುಕ್ಕು ಹಿಡಿದ ಸರಿಗೆಯನ್ನು ತೆಗೆದು ಬೇರೆ ಹಾಕಬೇಕೆಂದು ಅಲ್ಲಿನ ಸಾರ್ವಜನಿಕರು ಎಷ್ಟೋ ಸಲ ಸಂಬಂಧಿಸಿದ ವಿದ್ಯುತ್ ಆಫೀಸಿಗೆ ತಿಳಿಸಿದರೂ ಆ ಸರಿಗೆ ಬದಲಾಯಿಸದೆ ಇದ್ದುದರಿಂದ ಈ ಅನಾಹುತ ಆಗಿರುತ್ತದೆ. ಜನನಿಬಿಡ ಪ್ರದೇಶವಾದ ಅಲ್ಲಿ ತುಂಬಾ ಕಳವಳ ಉಂಟಾಗಿದೆ. ಇನ್ನಾದರೂ ಹಳೆ ಸರಿಗೆಗಳಿದ್ದಲ್ಲಿ ಅವುಗಳನ್ನು ಬದಲಾಯಿಸುವುದು ಅಗತ್ಯವಾಗಿದೆ.

ತೀರಿ ಹೋದ ಅಬುಬಕ್ಕರ್ ಬಡವನಾಗಿದ್ದು, ಆತನ ಹೆಂಡತಿ ಮತ್ತು ಒಂದು ಮಗು ಈಗ ನಿರ್ಗತಿಕರಾಗಿರುತ್ತಾರೆ. ಆತನ ದುಡಿತದಿಂದಲೇ ಅವರ, ಜೀವನ ಸಾಗುತ್ತಿತ್ತು. ಇದೀಗ ನಿರ್ಗತಿಕರಾದ ಅಬುಬಕ್ಕರನ ಹೆಂಡತಿ ಮತ್ತ ಮಗುವಿಗೆ ಸರಕಾರ ಶೀಘ್ರವಾಗಿ ಆರ್ಥಿಕ ಪರಿಹಾರವನ್ನು ನೀಡಿ ಉಪಕರಿಸುವುದು ಅತೀ ಅಗತ್ಯವಾಗಿರುತ್ತದೆ. ಈ ಕುರಿತು ವಿದ್ಯುತ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—ದಿನಾಂಕ ೭-೩-೧೯೮೯ ರಂದು ಮಂಗಳೂರು ತಾಲ್ಲೂಕು ಉಲ್ಲಾಳಪೇಟೆಯಲ್ಲಿ ೧೧ ಕೆ.ವಿ. ವಿದ್ಯುತ್ ಪ್ರಸಾರಣ ಮಾರ್ಗದ ಒಂದು ತಂತಿ ತುಂಡಾಗಿ ಕೆಳಗೆ ಬಿದ್ದಿತು. ಆ ವೇಳೆಯಲ್ಲಿ ಶ್ರೀ ಅಬೂಬಕ್ಕರ್ ಆ ಲೈನಿನ ಕೆಳಗೆ ನಿಂತಿದ್ದು ತುಂಡಾದ ತಂತಿಯೊಡನೆ ಸಂಪರ್ಕ ಹೊಂದಿ ವಿದ್ಯುತ್ ಆಘಾತ ಉಂಟಾಗಿ ಮರಣ ಹೊಂದಿದನು

ಮಂಡಳಿಯಲ್ಲಿ ಕಂಬಗಳು, ತಂತಿಗಳು, ಇತ್ಯಾದಿ ಲೈನಿನ ಸಾಮಗ್ರಿಗಳನ್ನು ಆಗಿಂದಾಗ್ಗೆ ಪರೀಕ್ಷಿಸಿ ಅವುಗಳನ್ನು ಬದಲಾಯಿಸಬೇಕೆಂದು ಕಂಡುಬಂದ ಕೂಡಲೇ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಉಲ್ಲಾಳಪೇಟೆ ಕ್ಷೇತ್ರದಲ್ಲಿ ಹಳತಾದ ತಂತಿ ಬದಲಾಯಿಸಲು ಅಂದಾಜುಗಳು ತಯಾರಾಗಿದ್ದು ಅವುಗಳನ್ನು ಆದಷ್ಟು ಶೀಘ್ರದಲ್ಲೇ ಬದಲಾಯಿಸಲಾಗುತ್ತದೆ. ಈ ಹಿಂದೆಯೂ ಇಂತಹ ಬದಲಾವಣೆ ಕೆಲಸ ನಡೆದಿವೆ.

ಮೃತನಾದ ಶ್ರೀ ಅಬೂಬಕ್ಕರ್ ಕುಟುಂಬಕ್ಕೆ ಪೋಲೀಸ್‌ನವರ ಮಹಜರ್ ವರದಿ, ಮರಣೋತ್ತರ ಶವಪರೀಕ್ಷೆ ವರದಿ ಇತ್ಯಾದಿ ವರದಿಗಳು ತಲುಪಿದ ಕೂಡಲೇ ಸೂಕ್ತ ಆರ್ಥಿಕ ಪರಿಹಾರ ಕೊಡಲು ಕ್ರಮ ಕೈಗೊಳ್ಳಲಾಗುತ್ತದೆ.

(4) ಬೆಳಗಾಂ ಸಂತೋಷ ಭವನ ಹೋಟೆಲಿನಲ್ಲಿ ಅಗ್ನಿ ದುರಂತದಲ್ಲಿ ಸತ್ತವರ ಕುಟುಂಬದವರಿಗೆ ಪರಿಹಾರ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿಯಲ್ಲಿ ಫೆಬ್ರುವರಿ ತಿಂಗಳಲ್ಲಿ ಸಂತೋಷ ಭವನದ (ಹೋಟೆಲ್) ಅಗ್ನಿ ಅನಾಹುತದಲ್ಲಿ ಮಡಿದವರ ಹೆಸರು ಹಾಗೂ ವಿಳಾಸ ಸರಿಯಾದುದ್ದು ಗುರುತಿಸಲು ಇಲಾಖೆಯಿಂದ ಯಾವ ಕಾರ್ಯಕ್ರಮ ನಡೆದಿದೆ ? ಸುಮಾರು ೬ ಜನ ಈ ಅಗ್ನಿ ಅನಾಹುತದಲ್ಲಿ ಮೃತ ಪಟ್ಟಿದ್ದು ಸಂಬಂಧಪಟ್ಟ ಮೃತರ ಕುಟುಂಬಕ್ಕೆ ಸರಕಾರದಿಂದ ಕೊಟ್ಟಿರುವ ಪರಿಹಾರಧನ ಯೋಗ್ಯ ಹಾಗೂ ವೇಳೆಗನುಗುಣವಾಗಿ ಕೊಡುವುದರಲ್ಲಿ ವಿಳಂಬವಾದದ್ದಕ್ಕೆ ಕಾರಣವೇನು ? ಹೋಟೆಲ್ ಆಡಿಗೆ ಮನೆಯಲ್ಲಿ ಈ ಒಂದು ಅನಾಹುತ ಜರುಗುವುದಕ್ಕೆ ಕಾರಣ ಕಂಡು ಹಿಡಿದು ಇಂಥ ಘಟನೆಗಳು ಇನ್ನು ಮುಂದೆ ಜರುಗದಿರುವ ಹಾಗೆ ರಾಜ್ಯಾದ್ಯಂತ ಹೋಟೆಲ್